**ದಿನಾಂಕಃ 04.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ.CMM.ವಕೀಲರಿಂದಃ**

ನಿಪಿ 55 ರಿಂದ 57 ರ ಬಗ್ಗೆ ನಿಮ್ಮ ವಾದ ಪತ್ರದಲ್ಲಿ ತಿಳಿಸಿದ್ದೀರಾ ಎಂದರೆ ತಿಳಿಸಿದ್ದೇನೆ ಎಂದು ಹೇಳುತ್ತಾರೆ. ಪೌತಿ ವಾರಸು ಖಾತೆಯನ್ನು ಮಾಡಲು ತಾಲ್ಲೂಕು ಕಚೇರಿಯಲ್ಲಿ ನಿಮ್ಮ ತಾಯಿ ಅರ್ಜಿಯನ್ನು ಸಲ್ಲಿಸಿದಾಗ ಲಕ್ಷ್ಮೀನಾರಾಯಣರವರ ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ರಾ ಎಂದರೆ ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ನಿಮ್ಮ ತಾಯಿಯ ಹೆಸರಿಗೆ ಪೌತಿ ವಾರಸು ಖಾತೆ ಯಾವ ದಿನಾಂಕದಲ್ಲಿ ಆಗಿದೆ ಎನ್ನುವ ಬಗ್ಗೆ ವಾದ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿದ್ದೇನೆ ಎಂದು ಹೇಳುತ್ತಾರೆ. ಲಕ್ಷ್ಮೀನಾರಾಯಣರವರು ಯಾವಾಗ ಮಾರಣ ಹೊಂದಿದರು ಎನ್ನುವ ಬಗ್ಗೆ ವಾದ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಹೇಳಿದ್ದೇನೆ ಎಂದು ಹೇಳುತ್ತಾರೆ. ದಿಃ12.03.1983 ರಂದು ಲಕ್ಷ್ಮೀನಾರಾಯಣ ಅವರು ಮರಣ ಹೊಂದಿದ್ದಾರೆ ಎಂದು ವಾದ ಪತ್ರದಲ್ಲಿ ಹೇಳಿದ್ದೇನೆ. ಸದರಿ ದಿನಾಂಕದಂದು ಲಕ್ಷ್ಮೀನಾರಾಯಣರವರು ಮರಣ ಹೊಂದಿದ್ದಾರೆ ಎಂದು ತೋರಿಸುವ ಬಗ್ಗೆ ನೀವೇನಾದರೂ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ ಹಾಜರು ಪಡಿಸಿದ್ದೇನೆ ಎಂದು ಹೇಳುತ್ತಾರೆ. ನೀವು ಹಾಜರು ಪಡಿಸಿರುವ ನಿಪಿ 8 ಮರಣ ಪ್ರಮಾಣ ಪತ್ರದಲ್ಲಿ ದಿಃ25.02.1983 ರಂದು ಮರಣ ಹೊಂದಿದ್ದಾರೆ ಎಂದು ನಮೂದು ಮಾಡಲಾಗಿದೆ ಎಂದರೆ ಸರಿ. ನಿಪಿ 69 ರ ಕರಡು ನಕ್ಷೆಯನ್ನು ಯಾರು ತಯಾರು ಮಾಡಿರುತ್ತಾರೆ ಎಂದರೆ ಕಂದಾಯ ನಿರೀಕ್ಷಕರು ತಯಾರು ಮಾಡಿಕೊಟ್ಟಿರುತ್ತಾರೆ ಎಂದು ಹೇಳುತ್ತಾರೆ. ನಿಪಿ 69 ರ ಕರಡು ನಕ್ಷೆಯ ಪ್ರಕಾರ ಪೂರ್ವಕ್ಕೆ ಗ್ರಾಮ ಠಾಣೆ ಮತ್ತು ವೆಂಕಟಶ್ಯಾಮಪ್ಪ ನವರ ಜಮೀನು ಇದೆ ಎಂದರೆ ಸರಿ. ಪಶ್ಚಿಮಕ್ಕೆ ವೆಂಕಟರಾಯಪ್ಪನವರ ಹಿಸ್ಸೆ ಎಂದು ಇದೆ ಎಂದರೆ ಸರಿ. ನಿಪಿ 69 ಕರಡು ನಕ್ಷೆಯಲ್ಲಿ ತೋರಿಸಿರುವ ಚೆಕ್ಕುಬಂದಿಗೂ ವಾದ ಪತ್ರದಲ್ಲಿ ತೋರಿಸಿರುವ ಚೆಕ್ಕುಬಂದಿಗೂ ವ್ಯತ್ಯಾಸವಿದೆ ಎಂದರೆ ಸರಿಯಲ್ಲ.

ನಿಪಿ 58 ಬ್ರಹ್ಮರಥೋತ್ಸವದ ಆಹ್ವಾನ ಪತ್ರಿಕೆಯಾಗಿದ್ದು, ಇದನ್ನು ನೀವು ಯಾವ ಕಾರಣಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ನಮ್ಮ ತಂದೆಯ ಕಾಲದಿಂದಲೂ ಸಹ ಬ್ರಹ್ಮರಥೋತ್ಸವವನ್ನು ಮಾಡುತ್ತಿದ್ದೆವು ಎಂದು ತೋರಿಸಲು ಹಾಜರು ಪಡಿಸಿರುತ್ತೇನೆ. ನಿಪಿ 68 ರ ಕ್ರಯ ಪತ್ರವನ್ನು ಯಾವ ಉದ್ದೇಶಕ್ಕೆ ಹಾಜರು ಪಡಿಸಿದ್ದೀರಾ ಎಂದರೆ ದಾವಾ ಆಸ್ತಿಯನ್ನು ಬೇರೆಯವರು ಕರಾರು ಮಾಡಿಕೊಂಡ ಕಾರಣ ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನೀವು ಇತ್ತೀಚೆಗೆ ಹಾಜರು ಪಡಿಸಿದ ನಿಪಿ 26 ರಿಂದ 69 ದಾಖಲೆಗಳನ್ನು ಮೊದಲೇ ಹಾಜರು ಪಡಿಸಲು ತೊಂದರೆ ಇತ್ತಾ ಎಂದರೆ ಬ್ಯಾಂಕಿನಲ್ಲಿ ಇಟ್ಟಿದ್ದೆವು,

ಆದ್ದರಿಂದ ನಂತರ ಹಾಜರು ಪಡಿಸಿರುತ್ತೇನೆ ಎಂದು ಹೇಳುತ್ತಾರೆ. ನೀವು ದಾವಾ ಆಸ್ತಿಯ ವಾರಸುದಾರರಾಗಿರುವುದಿಲ್ಲ, ಕೇಸಿಗೋಸ್ಕರ ನಿಪಿ 26 ರಿಂದ 69 ರ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿದ್ದೀರಾ ಎಂದರೆ ಸರಿಯಲ್ಲ. ನೀವು ಲಕ್ಷ್ಮೀನಾರಾಯಣನವರ ವಾರಸುದಾರರಲ್ಲ ಎಂದರೆ ಸರಿಯಲ್ಲ. ನೀವು ನಿಜವಾಗಿಯೂ ಲಕ್ಷ್ಮೀನಾರಾಯಣನವರ ವಾರಸುದಾರರಾಗಿದ್ದರೆ ಅದಕ್ಕೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಮೊದಲೇ ಹಾಜರು ಪಡಿಸುತ್ತಿದ್ರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ ಹೇ ಕೇ ಸರಿ ಇದೆ.**

**1 ನೇ ಹೆಚ್ಚುವರಿ ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಚಿಕ್ಕಬಳ್ಳಾಪುರ.**